# ವಿರಹಿಯ ತಕರಾರು

ಏ ಹುಡುಗಿ
ಕಡಲ ತಟದಲ್ಲಿ ನೀ ನಡೆದು
ಬಂದರೆ ಅನವರತ ಉಕ್ಕುವ
ಅಲೆಗಳು ಸಹ ಸ್ತಬ್ಧವಾಗಿ
ನಿನ್ನೆಡೆಗೆ ದೃಷ್ಟಿ ನೆಟ್ಟು ಕೂತುಬಿಡುತ್ತವೆ.

ಹೇಮಂತ ಋತುವಿನ
ಮುಂಜಾನೆಯ ನನ್ನ ಕನವರಿಕೆಗಳು
ಗೋಚರಕ್ಕೆ ಬರುವ ಹೊತ್ತಿಗೆ, ನಾನು
ನೀನೆ ಕೂತು ನಡೆಸುತ್ತಿದ್ದ ತೆಪ್ಪದಲ್ಲಿ
ಬೆಪ್ಪನಂತೆ ನಿನ್ನ ತೀಕ್ಷ್ಣ ಕಣ್ಣನೋಟದ
ಮಾದಕತೆಗೆ ಸೆರೆಯಾಗಿ ಸಾಗುತ್ತಿದ್ದೆ.

ಕಾಣದ ತರಂಗಗಳು ಅಂತರಂಗದಿ
ಹೊಕ್ಕು ನಿನ್ನನ್ನೇ ಧ್ಯಾನಿಸುವಷ್ಟು
ಅಂತರ್ಮುಖಿಯನ್ನಾಗಿ ಮಾಡಿವೆ...
ಹಕ್ಕಿ ಹಾಡಿಗೆ ದನಿಗೂಡಿಸುವ
ಮಟ್ಟಿಗೆ ನಾನು ಜಾಣನಾಗಿದ್ದು
ನಿನ್ನ ಸಹವಾಸದಿಂದಲೇ...

ಹೊಳೆಯಾಚೆಯ ನಿನ್ನ ಆಲಯದಿ
ಹೋಳಿಗೆ ಹೂರಣದಂತೆ ನಾಜೂಕಾಗಿ
ಕಲಸಿ ಪ್ರೀತಿಯನ್ನು ಹದಮಾಡಿದ
ಮೇಲೆ ನಡೆದ ಬೆರಗಿಗೆ ನನ್ನ
ಮರುಳತನವೇ ಸಾಕ್ಷಿ ಅಲ್ಲವೇ...

ನನ್ನದೊಂದು ತಕರಾರು ಇದೆ!
ನಿನಗೆಂದೇ ನಾನು ಬರೆದ
ಶೃಂಗಾರದ ಕವಿತೆಯ ಸಾಲು
ಅರ್ಥವಾದರೂ ಆಗಿಲ್ಲವೆಂದು
ತುಂಟನಗೆ ಬೀರಿ ನಟಿಸಿದ್ದು
ಯಾಕೆಂದು??

● **ಅಭಿಷೇಕ್ ಪೈ**



ವಾಗೀಶ ಹೆಗಡೆ